ಪರಿಸ್ಥಿತಿಯಲ್ಲಿ ಎರಡು ಮೂರು ಇರತಕ್ಕಂಥ ಡಾಕ್ಟರ್ಸ್‌ಗೆ ಕನಿಷ್ಠ ಎರಡು ಜನ ಒಂದು ಜನ ಇಲ್ಲದೇ ಇರತಕ್ಕಂಥದ್ದು ಇದೆ ಅದನ್ನು ನಾವು ಬೇರೆ ಆಲ್ಟರ್ ನೇಟ್ ಅರೇಂಜ್‌ಮೆಂಟನ್ನು ಅದು ಕಂಟ್ರಾಕ್ಟ್ ಅಥವಾ ಹೊಸದಾಗಿ ನೇಮಕ ಮಾಡಿಕೊಳ್ಳುವುದೋ ಬಿಡುವುದಿಲ್ಲ. ತಕ್ಷಣ ಏಪ್ರಿಲ್ ಫಸ್ಟ್ ಅಥವಾ ಸೆಕೆಂಡ್ ವೀಕ್‌ನಲ್ಲಿ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಉಳಿದಂತೆ ನಾವು ನೇರ ನೇಮಕಾತಿ ಮತ್ತು ಕಂಟ್ರಾಕ್ಟ್ ಬೇಸಿನ್ ಮೂಲಕ ತಕ್ಷಣ ಏಪ್ರಿಲ್ ಮೇನಲ್ಲಿ ತೆಗೆದುಕೊಳ್ಳುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 3705
ಸದಸ್ಯರ ಹೆಸರು : ಶ್ರೀ ಶಿವರಾಜ ಸಜ್ಜನವರ್ (ಹಾವೇರಿ)
ಉತ್ತರಿಸುವವರು : ಶ್ರೀ ಡಾ॥ ಹೆಚ್. ಸಿ. ಮಹದೇವಪ್ಪ

ಪ್ರಶ್ನೆ	ಉತ್ತರ
a) ಜನ ನಿರ್ಮಲ ಯೋಜನೆಯನ್ನು ಯಾವ ಯಾವ ತಾಲ್ಲೂಕುಗಳಲ್ಲಿ ಕೈಗೆತ್ತಿಕೊಳ್ಳಲಾಗಿದೆ.	ಜಲ ನಿರ್ಮಲ ಯೋಜನೆಯನ್ನು ಉತ್ತರ ಕರ್ನಾಟಕದ 11 ಜಿಲ್ಲೆಗಳ 72 ತಾಲ್ಲೂಕುಗಳಲ್ಲಿ ಕೈಗೆತ್ತಿಕೊಂಡಿದ್ದು, ವಿವರವನ್ನು ಅನುಬಂಧ–1ರಲ್ಲಿ ನೀಡಲಾಗಿದೆ.
b)ತಾಲ್ಲೂಕುವಾರು ಅಂದಾಜು ಮೊತ್ತವೆಷ್ಟು?	ತಾಲ್ಲೂಕುವಾರು ಅಂದಾಜು ಮೊತ್ತದ ವಿವರವನ್ನು ಅನುಬಂಧ–1ರಲ್ಲಿ ನೀಡಲಾಗಿದೆ.
c) ಜಲ ನಿರ್ಮಲ ಯೋಜನೆಯಲ್ಲಿ ಕೆಲಸ ಮಾಡುತ್ತಿರುವ ನೆರವು ಸಂಸ್ಥೆಗಳಾವುವು [ತಾಲ್ಲೂಕುವಾರು ವರದಿಯನ್ನು ಪೂರೈಸುವುದು]	ಜಲ ನಿರ್ಮಲ ಯೋಜನೆಯಲ್ಲಿ ಕೆಲಸ ಮಾಡುತ್ತಿರುವ ನೆರವು ಸಂಸ್ಥೆಗಳು ಹಾಗೂ ಇವುಗಳ ತಾಲ್ಲೂಕುವಾರು ವರದಿಯನ್ನು ಅನುಬಂಧ–3 ರಲ್ಲಿ ನೀಡಲಾಗಿದೆ.
d)ನೆರವು ಸಂಸ್ಥೆಗಳಿಗೆ ನೀಡುವ ಸಂಭಾವನೆ ಗುತ್ತಿಗೆ ಮೊತ್ತವೆಷ್ಟು?	ನೆರವು ಸಂಸ್ಥೆಗಳಿಗೆ ನೀಡಬೇಕಾಗಿರುವ ಗುತ್ತಿಗೆ ಮೊತ್ತ ಯೋಜನಾ ತಯಾರು ಹಂತಕ್ಕೆ ರೂ. 2082.71 ಲಕ್ಷಗಳು ಹಾಗೂ ಯೋಜನಾ ಅನುಷ್ಠಾನ ಹಂತಕ್ಕೆ ರೂ. 2153.50 ಲಕ್ಷಗಳೂ ವಿವರಗಳನ್ನು ಅನುಬಂಧ–3ರಲ್ಲಿ ನೀಡಿದೆ.

ಪ್ರಶ್ನೆ	ಉತ್ತರ
e)ನೆರವು ಸಂಸ್ಥೆಗಳ ಕರ್ತವ್ಯ ಮತ್ತು ಜವಾಬ್ದಾರಿಗಳೇನು?	ನೆರವು ಸಂಸ್ಥೆಗಳು ಜಲ ನಿರ್ಮಲ ಯೋಜನೆಯ ಯೋಜನಾ ಹಂತ, ಅನುಷ್ಠಾನ ಹಂತ ಹಾಗೂ ಅನುಷ್ಠಾನ ನಂತರ ಹಂತಗಳಲ್ಲಿ ನಿರ್ವಹಿಸ ಬೇಕಾಗಿರುವ ಕರ್ತವ್ಯ ಮತ್ತು ಜವಾಬ್ದಾರಿಗಳು ಈ ಕೆಳಕಂಡಂತಿವೆ. **ಯೋಜನಾ ಹಂತ** 1) ಯೋಜನೆಗೆ ಆಯ್ಕೆಯಾದ ಗ್ರಾಮಗಳಲ್ಲಿ ನೀರು ಸರಬರಾಜು, ಅಂತರಿಕ ರಸ್ತೆ ಮತ್ತು ಒಳಚರಂಡಿ ಕಾಮಗಾರಿಗಳಿಗೆ ಸೂಕ್ತ ಸಾಮಾಜಿಕ ಮತ್ತು ಭೌಗೋಳಿಕ ಸಮೀಕ್ಷೆಯನ್ನು ನಡೆಸಿ ಯೋಜನೆಯ ವರದಿಯನ್ನು ತಯಾರು ಮಾಡುವುದು. 2)ಹಾಲಿ ಇರುವ ಕುಡಿಯುವ ನೀರಿನ ವ್ಯವಸ್ಥೆಯಲ್ಲಿ ವಿತರಣ ಲೋಪದೋಷಗಳಿದ್ದರೆ ಅದನ್ನು ಸಮುದಾಯದ ಸಹಭಾಗಿತ್ವದೊಂದಿಗೆ ಸರಿಪಡಿಸುವ ಕ್ರಮ ಜರುಗಿಸುವುದು. 3) ಹಾಲಿ ಇರುವ ನೀರಿನ ಮೂಲಗಳ ಗುಣ ಮತ್ತು ಇಳುವರಿ ಪರೀಕ್ಷಿಸಿ, ಗ್ರಾಮದಲ್ಲಿ ಯೋಜನೆಗೆ ಬೇಕಾಗುವ ನೀರಿಗಾಗಿ ಮೂಲವನ್ನು ನಿಗದಿಪಡಿಸು ವುದು ಮತ್ತು ಅವುಗಳು ಶಾಶ್ವತ ಇರುವ ಹಾಗೆ ಸೂಕ್ತ ಅಂತರ್ಜಲ ಪುನಃಶ್ಚೇತನ ಕಾರ್ಯ ರೂಪಿಸುವುದು. 4) ಗ್ರಾಮ ನೀರು ಸರಬರಾಜು ನೈರ್ಮಲ್ಯ ಸಮಿತಿಗಳನ್ನು ರಚಿಸಿ, ಅವುಗಳು ನೀರು ಸರಬರಾಜು ಮತ್ತು ನೈರ್ಮಲ್ಯ ಯೋಜನೆಗಳನ್ನು ರೂಪಿಸಲು, ಅನುಷ್ಠಾನಗೊಳಿಸಲು ಮತ್ತು ಅನುಷ್ಠಾನಗೊಳಿಸಿದ ನಂತರ ನಿರಂತರ ಕಾರ್ಯಾಚರಣೆ ಮತ್ತು ನಿರ್ವಹಣೆಗೆ ಸಾಮರ್ಥ್ಯ ವೃದ್ಧಿಗೊಳಿಸುವುದು.

ಪ್ರಶ್ನೆ	ಉತ್ತರ
	5) ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಕಾಪಾಡುವ ಬಗ್ಗೆ ಮಾಹಿತಿ, ಶಿಕ್ಷಣ ಮತ್ತು ಸಂಪರ್ಕ ಕಾರ್ಯಕ್ರಮಗಳ ಮೂಲಕ ಸಮುದಾಯದ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವುದು. 6)ಸಮುದಾಯ ವಂತಿಕೆಯ ಶೇ. 50 ರಷ್ಟನ್ನು ಗ್ರಾಮ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿಯ ಸಹಕಾರದೊಂದಿಗೆ ಸಂಗ್ರಹಿಸುವುದು, ಇತ್ಯಾದಿ. **ಅನುಷ್ಠಾನ ಹಂತ** 1)ಯೋಜನಾ ಹಂತದಲ್ಲಿ ಯೋಜಿಸಿದ ನೀರು ಸರಬರಾಜು, ನೈರ್ಮಲ್ಯ ಕಾರ್ಯಗಳನ್ನು ಅನುಷ್ಠಾನ ಗೊಳಿಸುವಾಗ ಅವುಗಳ ಮೇಲ್ವಿಚಾರಣೆ ನಡೆಸುವುದು. 2) ಸಮುದಾಯ ವಂತಿಗೆಯ ಉಳಿದ ಶೇ. 50 ರಷ್ಟನ್ನು ಗ್ರಾಮ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿಯ ಸಹಕಾರದೊಂದಿಗೆ ಸಂಗ್ರಹಿಸುವುದು. 3)ಕನಿಷ್ಠ ಶೇ.30ರಷ್ಟು ಕುಟುಂಬಗಳಲ್ಲಿ ಶೌಚಾಲಯವನ್ನು ಕಟ್ಟುವಂತೆ ಪ್ರೇರೇಪಿಸುವುದು ಹಾಗೂ ಅಗತ್ಯ ತಾಂತ್ರಿಕ ಸಲಹೆ ಹಾಗೂ ನೆರವು ನೀಡುವುದು 4) ಅಂತರ್ಜಲ ಪುನಃಶ್ಚೇತನ ವ್ಯವಸ್ಥೆ ನಿರ್ಮಿಸುವ ಬಗ್ಗೆ ಸಲಹೆ ಹಾಗೂ ಮೇಲ್ವಿಚಾರಣೆ ನಡೆಸುವುದು 5)ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿಗಳು ನೀರು ಸರಬರಾಜು ವ್ಯವಸ್ಥೆಯ ಉಸ್ತುವಾರಿ ಮತ್ತು ನಿರ್ವಹಣೆ ಮಾಡುವ ಬಗ್ಗೆ ಸಾಮರ್ಥ್ಯ ಬೆಳೆಸಿಕೊಳ್ಳುವಂತೆ ಮಾಡುವುದು ಮತ್ತು ವಾರ್ಷಿಕ ಕಾರ್ಯಾಚರಣೆ ಮತ್ತು ನಿರ್ವಹಣಾ ವೆಚ್ಚದ ಶೇ. 100ರಷ್ಟು ಸಮುದಾಯದಿಂದ ಸಂಗ್ರಹಿಸುವುದು.

ಪ್ರಶ್ನೆ	ಉತ್ತರ
	6) ಗ್ರಾಮೀಣ ಮಹಿಳೆಯರು ಈ ಕಾರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಅವರ ಸಾಮರ್ಥ್ಯ ವೃದ್ಧಿಸುವುದು ಇತ್ಯಾದಿ. **ಅನುಷ್ಠಾನ ನಂತರದ ಹಂತ** 1) ಗ್ರಾಮ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿಯು ಉಸ್ತುವಾರಿ ಮತ್ತು ನಿರ್ವಹಣೆ ಕಾರ್ಯವನ್ನು ಮಾಡುವುದನ್ನು ಮೇಲ್ವಿಚಾರಣೆ ಮಾಡುವುದು. 2)ಅನುಷ್ಠಾನ ಹಂತದಲ್ಲಿ ನಿರ್ಮಾಣಗೊಂಡ ಯಾವುದೇ ಕಾಮಗಾರಿಗಳಲ್ಲಿ ಲೋಪದೋಷಗಳಿದ್ದರೆ ಸರಿಪಡಿಸುವುದು ಹಾಗೂ ಅಪೂರ್ಣಗೊಂಡ ಕಾಮಗಾರಿಗಳಿದ್ದರೆ ಪೂರ್ಣಗೊಳಿಸುವುದು.
f)ನೆರವು ಸಂಸ್ಥೆಗಳು ಸಮರ್ಪಕವಾಗಿ ಕೆಲಸ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಹೌದು. ನೆರವು ಸಂಸ್ಥೆಗಳು ನಿರ್ವಹಿಸುತ್ತಿರುವ ಕೆಲಸಗಳಲ್ಲಿ ಕೆಲವೊಮ್ಮೆ ಲೋಪದೋಷಗಳು ಕಂಡು ಬಂದಿರುತ್ತದೆ.
g)ಬಂದಿದ್ದರೆ, ತೆಗೆದುಕೊಂಡ ಕ್ರಮವೇನು?	ಯೋಜನಾ ಪ್ರಗತಿ ಪರಿಶೀಲನೆಯನ್ನು ಕಾಲಕಾಲಕ್ಕೆ ನಡೆಸಿ ಕಂಡು ಬಂದಿರುವ ಲೋಪದೋಷಗಳನ್ನು ನೆರವು ಸಂಸ್ಥೆಗಳಿಗೆ ತಿಳಿಸಿ ಈ ಬಗ್ಗೆ ಅಗತ್ಯ ಸೂಚನೆಗಳನ್ನು ನೀಡಿ ಅವುಗಳನ್ನು ಸರಿಪಡಿಸಲು ಕ್ರಮ ಕೈಗೊಳ್ಳಲಾಗಿದೆ.

ಅನುಬಂಧ–1

ಜಲ ನಿರ್ಮಲ ಯೋಜನೆಯನ್ನು ಕೈಗೆತ್ತಿಕೊಂಡಿರುವ ತಾಲ್ಲೂಕುಗಳ ಹಾಗೂ ತಾಲ್ಲೂಕುವಾರು ಅಂದಾಜು ಮೊತ್ತದ ವಿವರ

ಜಿಲ್ಲೆ	ತಾಲ್ಲೂಕು	ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ)
ಬ್ಯಾಚ್–1		
1) ಬಾಗಲಕೋಟೆ	1. ಬಾದಾಮಿ	671.46
	2. ಬಾಗಲಕೋಟೆ	92.82
	3. ಬೀಳಗಿ	169.46
	4.ಹುನಗೋಡ್	400.76
	5. ಜಮಖಂಡಿ	227.65
	6. ಮುಧೋಳ್	404.02
	ಒಟ್ಟು	**1966.17**
2) ಬೆಳಗಾಂ	7. ಅಥಣಿ	1178.94
	8.'ಬೈಲಹೊಂಗಲ	336.10
	9.ಬೆಳಗಾಂ	1292.94
	10.ಚಿಕ್ಕೋಡಿ	1210.94
	11.ಗೋಕಾಕ್	983.66
	12. ಹುಕ್ಕೇರಿ	550.98
	13.ಖಾನಾಪುರ	669.37
	14. ರಾಯಭಾಗ್	1085.66
	15. ರಾಮದುರ್ಗ	354.57
	16. ಸವದತ್ತಿ	170.26
	ಒಟ್ಟು	**7833.42**

ಜಿಲ್ಲೆ	ತಾಲ್ಲೂಕು	ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ)
3) ಬಿಜಾಪುರ	17. ಬಸ[illegible]ಬಾಗೇವಾಡಿ	801.86
	18.ಬಿ[illegible]ಪುರ	643.32
	[illegible] ಇಂಡಿ	706.90
	20. ಮುದ್ದೇಬಿಹಾಳ್	319.31
	21. ಸಿಂದಗಿ	592.12
	ಒಟ್ಟು	**3063.51**
4)ಧ[illegible]ಾಡ	22. ಧಾರವಾಡ	231.48
	23. ಹುಬ್ಬಳ್ಳಿ	1319.59
	24. ಕಲಘಟಗಿ	292.25
	25. ಕುಂದಗೋಳ್	606.40
	26. ನವಲಗುಂದ	832.83
	ಒಟ್ಟು	**3282.55**
5) ಗದಗ	27. ಗದಗ	1362.76
	28. ಮುಂಡರಗಿ	106.37
	29. ನರಗುಂದ	451.61
	30. ರೋಣ	1268.01
	31. ಶಿರಹಟ್ಟಿ	461.21
	ಒಟ್ಟು	**3649.96**
6) ಗುಲ್ಬರ್ಗಾ	32. ಅಫಜಲ್ ಪುರ	486.73
	33. ಆಳಂದ	613.76
	34. ಚಿಂಚೋಳಿ	508.70

ಜಿಲ್ಲೆ	ತಾಲ್ಲೂಕು	ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ)
	35.ಚಿತ್ತಾಪುರ	667.55
	36.ಗುಲ್ಬರ್ಗಾ	435.66
	37.ಜೇವರ್ಗಿ	822.28
	38.ಸೇಡಂ	741.85
	39.ಷಹಾಪುರ	505.45
	40.ಶೋರಾಪುರ	526.03
	41.ಯಾದಗೀರ್	250.81
	ಒಟ್ಟು	**5558.83**
7)ಹಾವೇರಿ	42. ಬ್ಯಾಡಗಿ	275.69
	43. ಹಂಗಲ್	785.59
	44. ಹಾವೇರಿ	1216.68
	45: ಹಿರೇಕೆರೂರು	549.10
	46. ರಾಣೇಬೆನ್ನೂರು	2362.32
	47. ಸಾವನೂರ್	352.26
	48. ಶಿಗ್ಗಾಂವ್	336.20
	ಒಟ್ಟು	**5877.84**
8)ಉತ್ತರ ಕನ್ನಡ	49. ಅಂಕೋಲಾ	194.10
	50. ಭಟ್ಕಳ	421.06
	51. ಹಳಿಯಾಳ	534.33
	52. ಹೊನ್ನಾವರ	236.16
	53. ಇಯಿಡಾ	273.18

ಜಿಲ್ಲೆ	ತಾಲ್ಲೂಕು	ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ)
	54. ಕಾರವಾರ	102.12
	55.ಕುಮಟಾ	114.57
	56. ಮುಂಡಗೋಡ್	294.02
	57.ಸಿದ್ದಾಪುರ	374.07
	58. ಶಿರಸಿ	251.54
	59.ಯಲ್ಲಾಪುರ	107.32
	ಒಟ್ಟು	**2902.47**
	ಒಟ್ಟು ಬ್ಯಾಚ್–I	**34134.75**
ಬ್ಯಾಚ್–II		
9)ಬೀದರ್	60. ಔರಾದ್	1204.11
	61.ಬಸವಕಲ್ಯಾಣ	1309.83
	62.ಭಾಲ್ಕಿ	1153.36
	63.ಬೀದರ್	1332.68
	64.ಹುಮ್ನಾಬಾದ್	1145.27
	ಒಟ್ಟು	**6145.25**
10) ಕೊಪ್ಪಳ	65.ಗಂಗಾವತಿ	471.86
	66.ಕೊಪ್ಪಳ	242.85
	67. ಕುಷ್ಟಗಿ	820.69
	68. ಯಲಬುರ್ಗ	42.14
	ಒಟ್ಟು	**1577.54**
11)ರಾಯಚೂರು	69.ದೇವದುರ್ಗ	870.00
	70.ಲಿಂಗಸಗೂರು	565.90
	71.ರಾಯಚೂರು	929.43

ಜಲ ನಿರ್ಮಲ ಯೋಜನೆಯಲ್ಲಿ ಕೆಲಸ ಮಾಡುತ್ತಿರುವ ನೆರವು ಸಂಸ್ಥೆಗಳು ಹಾಗೂ ಸದರಿ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿರುವ ತಾಲ್ಲೂಕುಗಳ ವಿವರ

ಕ್ರ.ಸಂ.	ಜಿಲ್ಲೆಗಳು	ತಾಲ್ಲೂಕುಗಳ	ನೆರವು ಸಂಸ್ಥೆ/ಸರ್ಕಾರೇತರ ಸಂಸ್ಥೆಗಳು (ಸ.ಸಂ)
1.	ಬಾಗಲಕೋಟೆ	ಬಾದಮಿ,ಹುನಗುಂದ	ಅಬೆಲ್ ಇಂಜಿನಿಯರಿಂಗ್ ಸಮಾಲೋಚಕರು, ಬೆಂಗಳೂರು
		ಬಾಗಲಕೋಟೆ, ಬೀಳಗಿ ಜಮಖಂಡಿ, ಮುಧೋಳ್	ಸ್ಟೆಮ್ ಸಮಾಲೋಚಕರು, ಬೆಂಗಳೂರು
2.	ಬೆಳಗಾಂ	ಬೆಳಗಾಂ,ಬೈಲಹೊಂಗಲ, ರಾಮದುರ್ಗ, ಖಾನಾಪುರ	ಸ್ಟೆಮ್ ಸಮಾಲೋಚಕರು, ಬೆಂಗಳೂರು
		ಹುಕ್ಕೇರಿ, ಚಿಕ್ಕೋಡಿ, ಗೋಕಾಕ್	ಸ್ಟೆಮ್ ಸಮಾಲೋಚಕರು, ಬೆಂಗಳೂರು
		ರಾಯ್‌ಭಾಗ್, ಅಥಣಿ	ಅಂಮಿನ್ ಭಾವಿ ಮತ್ತು ಹೆಗ್ಡೆ ಸಮಾಲೋಚಕರು, ಧಾರವಾಡ
		ಖಾನಾಪುರ	ಆರ್.ಡಿ.ಎಸ್. ಮುರ್‌ಗೋಡ್ , ಬೆಳಗಾಂ (ಸ.ಸಂ)
3.	ಬೀದರ್	ಔರಾದ್, ಬೀದರ್	ಡಿ.ಹೆಚ್.ವಿ.ಸಮಾಲೋಚಕರು, ನವದೆಹಲಿ
		ಬೀದರ್, ಭಾಲ್ಕಿ	ನಿಕೇತನ್ ಸಮಾಲೋಚಕರು, ಬೆಂಗಳೂರು
		ಬೀದರ್, ಹುಮ್ನಾಬಾದ್	ಜಿ.ಎಸ್.ಎಸ್. ಸಮಾಲೋಚಕರು ಮೈಸೂರು
		ಬಸವಕಲ್ಯಾಣ	ಸಿ.ಇ.ಎಸ್. ಸಮಾಲೋಚಕರು ಬೆಂಗಳೂರು
4.	ಬಿಜಾಪುರ	ಬಿಜಾಪುರ, ಮುದ್ದೇಬಿಹಾಳ್, ಇಂಡಿ, ಸಿಂಧಗಿ,ಬಸವನಬಾಗೇವಾಡಿ	ನಿಕೇತನ ಸಮಾಲೋಚಕರು, ಬೆಂಗಳೂರು

ಕ್ರ.ಸಂ.	ಜಿಲ್ಲೆಗಳು	ತಾಲ್ಲೂಕುಗಳು ನೆರವು	ಸಂಸ್ಥೆ/ಸರ್ಕಾರೇತರ ಸಂಸ್ಥೆಗಳು (ಸ.ಸಂ)
		ಬಿಜಾಪುರ, ಮುದ್ದೇಬಿಹಾಳ್, ಬಸವನ ಬಾಗೇವಾಡಿ (ಬಹು ಗ್ರಾಮ ಯೋಜನೆ)	ನಿಕೇತನ ಸಮಾಲೋಚಕರು, ಬೆಂಗಳೂರು
		ಇಂಡಿ, ಸಿಂಧಗಿ (ಯೋಜನಾ ಹಂತದಲ್ಲಿ ಮಾತ್ರ)	ಬಿ.ವಿ.ವಿ.ಎಸ್. ಸಮಾಲೋಚಕರು, ಬಾಗಲಕೋಟೆ
5.	ಧಾರವಾಡ	ಧಾರವಾಡ, ನವಲಗುಂದ ಹುಬ್ಬಳ್ಳಿ, ಕುಂದಗೋಳ್, ಕಲಘಟಗಿ	ಅಮಿನ್ ಬಾವಿ ಮತ್ತು ಹೆಗ್ಡೆ ಸಮಾಲೋಚಕರು, ಬಾಗಲಕೋಟೆ ಸ್ಟುಪ್ ಸಮಾಲೋಚಕರು, ಬೆಂಗಳೂರು
6.	ಗದಗ್	ಗದಗ್,ಶಿರಹಟ್ಟಿ, ಮುಂಡರಗಿ	ಸ್ಪ್ಯಾನ್ ಸಮಾಲೋಚಕರು,ನವದೆಹಲಿ
		ರೋಣ್, ನರಗುಂದ್(ಅನುಷ್ಠಾನ ಹಂತದಲ್ಲಿ ಮಾತ್ರ)	ಸ್ಟುಪ್ ಸಮಾಲೋಚಕರು ಬೆಂಗಳೂರು
		ರೋಣ್, ನರಗುಂದ್(ಯೋಜನಾ ಹಂತದಲ್ಲಿ ಮಾತ್ರ)	ದಲಾಲ್ ಮಾಟ್ ಮ್ಯಾಕ್ ಡೊನಲ್ಟ್, ಚೆನ್ನೈ
7.	ಗುಲ್ಬರ್ಗಾ	ಗುಲ್ಬರ್ಗಾ, ಆಳಂದ್, ಚಿಂಚೋಳಿ, ಚಿತ್ತಾಪುರ್, ಅಫ್ಜಲ್‌ಪುರ್	ಸಿ.ಇ.ಎಸ್. ಸಮಾಲೋಚಕರು, ಬೆಂಗಳೂರು
		ಯಾದ್‌ಗೀರ್, ಸುರಾಪುರ್, ಶೋರಾಪುರ್, ಜೇವರ್ಗಿ, ಸೇಡಂ	ತಾಂತ್ರಿಕ ಸಮಾಲೋಚಕರು, ಮುಂಬೈ

ಕ್ರ.ಸಂ.	ಜಿಲ್ಲೆಗಳು	ತಾಲ್ಲೂಕುಗಳು	ನೆರವು ಸಂಸ್ಥೆ/ಸರ್ಕಾರೇತರ ಸಂಸ್ಥೆಗಳು (ಸ.ಸಂ)
8.	ಹಾವೇರಿ	ಹಾವೇರಿ, ಹಾನಗಲ್, ಶಿಗ್ಗಾವ್, ಸವಣೂರ್	ಎಂ.ಡಿ.ಪಿ. ಸಮೂಹೋಲ್ಲಚಕರು, ನವಚೆಹಲಿ
		ಬ್ಯಾಡಗಿ, ಹಿರೇಕೆರೂರ್, ರಾಣೆಬೆನ್ನೂರ್	ಡಿ.ಹೆಚ್.ವಿ. ಸಮೋಲೋಲ್ಲಚಕರು, ನವಚೆಹಲಿ
9.	ಕೊಪ್ಪಳ	ಕೊಪ್ಪಳ, ಗಂಗಾವತಿ, ಯಲಬುರ್ಗಾ, ಕುಷ್ಟಗಿ	ಐ.ಜಿ.ಐ ಮತ್ತು ಎಸ್. ಸಮೂಹೋಲ್ಲಚಕರು, ಹೈದರಾಬಾದ್
10.	ರಾಯಚೂರು	ರಾಯಚೂರು, ದೇವದುರ್ಗ,	ಸೆಮ್ಕೊ ಸಮೂಹೋಲ್ಲಚಕರು, ಬೆಂಗಳೂರು
		ಸಿಂಧನೂರ್, ಲಿಂಗಸುಗೂರ್	
11.	ಉತ್ತರ ಕನ್ನಡ	ಅಂಕೋಲ, ಭಟ್ಕಳ, ಹೊನ್ನಾವರ, ಕಾರವಾರ, ಕುಮ್ಟ	ವ್ಯಾಪ್ ಕೋಸ್ ಸಮೂಹೋಲ್ಲಚಕರು ದಹಲಿ,
		ಹಳಿಯಾಳ, ಮುಂಡಗೋಡ್, ಸಿದ್ದಾಪುರ, ಸಿರಸಿ ಯಲ್ಲಾಪುರ	ಐ.ಜಿ.ಐ. ಮತ್ತು ಎಸ್. ಸಮೂಹೋಲ್ಲಚಕರು, ಹೈದರಾಬಾದ್

ಅನುಬಂಧ–3

ಜಲನಿರ್ಮಲ ಯೋಜನೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೆರವು ಸಂಸ್ಥೆಗಳಿಗೆ ಯೋಜನಾ ತಯಾರು ಹಾಗೂ ಯೋಜನಾ ಅನುಷ್ಠಾನ ಹಂತಗಳಿಗೆ ನೀಡಬೇಕಾಗಿರುವ ಗುತ್ತಿಗೆ ಮೊತ್ತದ ವಿವರ

ಕ್ರ.ಸಂ.	ಜಿಲ್ಲೆಗಳು	ನೆರವು ಸಂಸ್ಥೆ	ನೀಡಬೇಕಾಗಿರುವ ಗುತ್ತಿಗೆ ಮೊತ್ತ	
			ಯೋಜನಾ ಹಂತ	ಅನುಷ್ಠಾನ ಹಂತ
1.	ಬಾಗಲಕೋಟೆ	ಅಬೆಲ್ ಇಂಜಿನಿಯರಿಂಗ್ ಸಮಾಲೋಚಕರು, ಬೆಂಗಳೂರು	118.00	133.20
		ಸ್ಟುಪ್‌ಸ್ಟೆಮ್ ಸಮಾಲೋಚಕರು, ಬೆಂಗಳೂರು	55.14	79.92
2.	ಬೆಳಗಾಂ	ಸಮಲೋಚಕರು, ಬೆಂಗಳೂರು	108.34	89.16
		ಸ್ವ್ಯಾನ್ ಸಮಾಲೋಚಕರು, ನವದೆಹಲಿ	89.93	100.67
		ಅಮಿನ್ ಭಾವಿ ಮತ್ತು ಹೆಗ್ಡೆ ಸಮೋಲೋಚಕರು, ಧಾರವಾಡ	67.02	73.45
		ಆರ್.ಡಿ.ಎಸ್. ಮುರ್‌ಗೋಡ್, ಬೆಳಗಾಂ (ಸ.ಸಂ)	–	14.67
3.	ಬೀದರ್	ಡಿ.ಹೆಚ್.ವಿ. ಸಮಾಲೋಚಕರು, ನವದೆಹಲಿ	77.74	86.16
		ನಿಕೆತನ್ ಸಮಾಲೋಚಕರು ಬೆಂಗಳೂರು	71.76	79.92
		ಜೆ.ಎಸ್.ಎಸ್. ಸಮಾಲೋಚಕರು, ಮೈಸೂರು	89.70	99.99
		ಸಿ.ಇ.ಎಸ್. ಸಮಾಲೋಚಕರು, ಬೆಂಗಳೂರು	59.80	66.60

ಕ್ರ.ಸಂ.	ಜಿಲ್ಲೆಗಳು	ನೆರವು ಸಂಸ್ಥೆ	ನೀಡಬೇಕಾಗಿರುವ ಗುತ್ತಿಗೆ ಮೊತ್ತ	
			ಯೋಜನಾ ಹಂತ	ಅನುಷ್ಠಾನ ಹಂತ
4.	ಬಿಜಾಪುರ	ನಿಕೇತನ ಸಮಾಲೋಚಕರು, ಬೆಂಗಳೂರು	102.20	199.98
		ನಿಕೇತನ ಸಮಾಲೋಚಕರು, ಬೆಂಗಳೂರು (ಬ.ಗ್ರಾಯೋ.)	131.56	–
		ಬಿ.ವಿ.ವಿ.ಎಸ್. ಸಮಾಲೋಚಕರು, ಬಾಗಲಕೋಟೆ	67.48	–
5.	ಧಾರವಾಡ	ಅಮಿನ್ ಭಾವಿ ಮತ್ತು ಹೆಗ್ಡೆ ಸಮಾಲೋಚಕರು, ಧಾರವಾಡ	44.25	53.33
		ಸ್ಟುಪ್ ಸಮಾಲೋಚಕರು, ಬೆಂಗಳೂರು	84.62	99.99
6.	ಗದಗ್	ಸ್ಪ್ಯಾನ್ ಸಮಾಲೋಚಕರು, ನವದೆಹಲಿ	101.66	113.22
		ದಲಾಲ್ ಮಾಟ್ ಮ್ಯಾಕ್ ಡೊನಾಲ್ಡ್ ಚೆನ್ನೈ	77.74	–
		ಸ್ಟುಪ್ ಸಮಾಲೋಚಕರು, ಬೆಂಗಳೂರು	–	86.58
7.	ಗುಲ್ಬರ್ಗಾ	ಸಿ.ಇ.ಎಸ್. ಸಮಾಲೋಚಕರು, ಬೆಂಗಳೂರು	107.64	107.79
		ಷಾ ತಾಂತ್ರಿಕ ಸಮಾಲೋಚಕರು,ಮುಂಬೈ	95.68	106.66
8.	ಹಾವೇರಿ	ಎಂ.ಡಿ.ಪಿ ಸಮಾಲೋಚಕರು, ನವದೆಹಲಿ	95.68	106.66
		ಡಿ.ಹೆಚ್.ವಿ.ಸಮಾಲೋಚಕರು ನವದೆಹಲಿ	93.72	93.32

ಪ್ರಶ್ನೆ ಸಂಖ್ಯೆ:295(3705)

(ಶ್ರೀ ಶಿವರಾಜು ಸಜ್ಜನರ್ ಪರವಾಗಿ ಶ್ರೀ ಸಿ.ಎಂ. ಉದಾಸಿ ಮಾನ್ಯ ಸದಸ್ಯರು ಪ್ರಶ್ನೆ ಕೇಳಿದರು)

ಶ್ರೀ ಸಿ.ಎಂ. ಉದಾಸಿ: ಮಾನ್ಯ ಅಧ್ಯಕ್ಷರೇ, ಜಲ ನಿರ್ಮಲ ಯೋಜನೆಯಲ್ಲಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದರ ಸಲುವಾಗಿ ಈ ಯೋಜನೆಯಲ್ಲಿ ಕೆಲಸ ಮಾಡುತ್ತಿರುವ ನೆರವು ಸಂಸ್ಥೆಗಳು ಯಾವುವು ಅಂತ ನಾವು ತಾಲ್ಲೂಕುವಾರು ವರದಿಯನ್ನು ನಾವು ಕೇಳಿದ್ದೆವು. ನಾವು ಕೇಳಿದ್ದಕ್ಕೆ ಕೊಟ್ಟಿರುವಂತಹ ಉತ್ತರದಲ್ಲಿ 11 ಜಿಲ್ಲೆಯಲ್ಲಿ ಸುಮಾರು 445 ಕೋಟಿ ರೂಪಾಯಿಗಳ ಯೋಜನೆಗಳಿಗೆ ಕರ್ನಾಟಕ ರಾಜ್ಯದಲ್ಲಿ ಅನೇಕ ಜನ ಲಭ್ಯವಿದ್ದಾಗಲು ಸಹ ದೆಹಲಿ ಸ್ವಾನ್ ಸಮಾಲೋಚಕರು ದೆಹಲಿ, ಡಿ.ಹೆಚ್.ಪಿ. ಸಮಾಲೋಚಕರು ನವದೆಹಲಿ, ಸ್ವಾನ್ ಸಮಾಲೋಚಕರು ದೆಹಲಿ, ಜಲಾಲ್ ಮ್ಯಾಕ್‌ಡೊನಾಲ್ಡ್ ಚಿನ್ನೈ, ಶಾರ್ಕ್ ಸಮಾಲೋಚಕರು ಮುಂಬೈ ಮತ್ತು ದೆಹಲಿಯ ಇನ್ನು ಮೂರು ಸಂಸ್ಥೆಗಳಿಗೆ ಹೈದ್ರಾಬಾದ್ ಸಂಸ್ಥೆಗಳಿಗೆ ಕೊಟ್ಟಿರುವುದಕ್ಕೆ ಕಾರಣ ಏನು? ಸ್ಥಳೀಯರಿಗೆ ಉದ್ಯೋಗ ಕೊಡಬೇಕು ಎಂದು ಇರುವಾಗ ಇದರಲ್ಲಿ ತಂತ್ರಜ್ಞಾನದ ಪ್ರಶ್ನೆ ಇಲ್ಲ. ಕುಡಿಯುವ ನೀರು ಪೂರೈಕೆ ಯೋಜನೆಯನ್ನು ಜಾರಿಗೊಳಿಸುತ್ತಿರಬೇಕಾದರೆ ಹೊರಗಿನವರಿಗೆ ಈ ವ್ಯವಸ್ಥೆಯನ್ನು ಮಾಡಿ ಕೊಡುವುದಕ್ಕೆ ಕಾರಣ ಏನು? ಗುತ್ತಿಗೆಯನ್ನು ಕೊಡಲಿಕ್ಕೆ ಕಾರಣ ಏನು? ಎನ್ನುವುದು ನನ್ನ ಮೊದಲನೆಯ ಪ್ರಶ್ನೆ. ಅದರ ನಂತರ ನಾನು ಕೇಳಿದಂತಹ ಪ್ರಶ್ನೆಯಲ್ಲಿ ನೆರವು ಸಂಸ್ಥೆಗಳಿಗೆ ಸಮರ್ಪಕವಾಗಿ ಕೆಲಸ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದಾಗ ಹೌದು ಎಂದು ಉತ್ತರ ಹೇಳಿದ್ದಾರೆ. ಹೌದಾಗಿದ್ದರೆ ಆ ಸಂಸ್ಥೆಗಳು ಯಾವುವು? ಅವುಗಳ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಇದು ಗದಗ್ ಜಿಲ್ಲೆಯಲ್ಲಿ ಇಂತದ್ದು ಏನಾದರೂ ಈ ನೆರವು ಸಂಸ್ಥೆಗಳಿಂದ ಅವ್ಯವಹಾರ ಆಗಿದೆಯೇ? ಹಣಕಾಸಿನ ಅವ್ಯವಹಾರ ಆಗಿದೆಯೇ ಎನ್ನುವುದನ್ನು ಸಭೆಯ ಗಮನಕ್ಕೆ ತರಬೇಕು ಅಂತ ನಾನು ಮಾನ್ಯ ಸಚಿವರನ್ನು ಕೇಳುತ್ತಿದ್ದೇನೆ.

ಡಾ. ಹೆಚ್.ಸಿ. ಮಹದೇವಪ್ಪ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಅಧ್ಯಕ್ಷರೇ ಜಲ ನಿರ್ಮಲ್ ಯೋಜನೆ ವಿಶ್ವಬ್ಯಾಂಕಿನ ನೆರವಿನಡಿಯಲ್ಲಿ ಏಪ್ರಿಲ್ 2000 ಇಸವಿಯಲ್ಲಿ ರಾಜ್ಯದಲ್ಲಿ ಮಂಜೂರಾಯಿತು. ಅದರ ಕಾಮಗಾರಿ 2003ನೇ ಇಸವಿಯಲ್ಲಿ ನಡೆಯುತ್ತಿದೆ. ಸುಮಾರು ಒಂದು ಸಾವಿರ ಕೋಟಿ ರೂಪಾಯಿಗಳ ಅಂದಾಜಿನ ಈ ಯೋಜನೆ ಕುಡಿಯುವ ನೀರು, ಒಳಚರಂಡಿ, ಒಳರಸ್ತೆಗಳು ಮತ್ತು 30 ಟಾಯ್ ಲೇಟ್ಸ್. ಈ ರೀತಿ ಕ್ರಿಯಾಯೋಜನೆ

ಇಟ್ಟುಕೊಂಡು ಇದರಲ್ಲಿ ಕಾರ್ಯಕ್ರಮ ಪ್ರಾರಂಭ ಮಾಡಿದೆ 11 ಜಿಲ್ಲೆಗಳಲ್ಲಿ, ಉತ್ತರ ಕರ್ನಾಟಕದ 11 ಜಿಲ್ಲೆಯ ಹೆಸರುಗಳನ್ನು ಕೊಟ್ಟಿದ್ದೇವೆ. ಇದರಲ್ಲಿ ಒಂದು ಕ್ರಿಯಾ ಯೋಜನೆ ತಯಾರು ಮಾಡತಕ್ಕಂಥ ಕೆಲಸದಲ್ಲಿ ಜಿಲ್ಲಾಪಂಚಾಯಿತಿ ಇಂಜಿನೀಯರಿಂಗ್ ವಿಭಾಗವೇ ಎಲ್ಲಾ ಕೆಲಸ ಮಾಡುತ್ತದೆ. ಆದರೆ ಈ ಒಂದು ಯೋಜನೆಯನ್ನು ತಯಾರು ಮಾಡಲಿಕ್ಕೆ ಈ ಯೋಜನಾ ಹಂತವನ್ನು ಪ್ರಾಂಭಿಸಲಿಕ್ಕೆ ಯೋಜನೆಯಲ್ಲಿ ಆಯ್ಕೆಯಾದಂತಹ ಗ್ರಾಮಗಳು ಕುಡಿಯುವ ನೀರು ಸರಬರಾಜು ಇಂತಹದ್ದನ್ನೆಲ್ಲಾ ತಯಾರು ಮಾಡಲಿಕ್ಕೆ ಇದು ಒಂದು ದೊಡ್ಡ ಯೋಜನೆ ಆಗಿದೆ. ಅದಕ್ಕೆ ಒಂದು ಸಂಘ ಸಂಸ್ಥೆಗಳ ಮುಖಾಂತರ ಎನ್.ಜಿ.ಓ. ಮುಖಾಂತರ ಅ ಗ್ರಾಮದ ಜನರಲ್ಲಿ ನಾವು ಅವೇರ್ ನೆಸ್ ಕ್ರಿಯೇಟ್ ಮಾಡಿ ನಾವು ಯಾವ ರೀತಿಮಾಡಬೇಕು ಎನ್ನುವುದಕ್ಕೆ ವಿಶ್ವಬ್ಯಾಂಕಿನ ನೆರವಿನ ಯೋಜನೆಯಾದ್ದರಿಂದ ನಮ್ಮ ಇಷ್ಟ ಬಂದವರಿಗೆ ಕೊಡಲಿಕ್ಕೆ ಬರುವುದಿಲ್ಲ. ಗ್ಲೋಬಲ್ ಟೆಂಡರ್ ಮುಖಾಂತರವೇ ಈ ಒಂದು ಎನ್.ಜಿ.ಓಗಳನ್ನು ಆಯ್ಕೆ ಮಾಡಿಕೊಂಡು ಮಾಡುತ್ತೇವೆ. ಮೊದಲ 6 ತಿಂಗಳು ಯೋಜನೆ ತಯಾರು ಮಾಡಲಿಕ್ಕೆ ಮತ್ತು ಕಾಮಗಾರಿ ಪ್ರಾರಂಭ ಮಾಡಲಿಕ್ಕೆ 12 ತಿಂಗಳು ಒಟ್ಟು 18 ತಿಂಗಳಿಗೆ ಅವರಿಗೆ 12 ಲಕ್ಷ ರೂಪಾಯಿಯನ್ನು ಒಂದೊಂದು ಸಂಸ್ಥೆಗೆ ಕೊಟ್ಟಿದೆ. ಸುಮಾರು 15 ಗ್ರಾಮಗಳಲ್ಲಿ ಇವರು ಕೆಲಸ ಮಾಡಬೇಕಾಗುತ್ತದೆ. ಇಲ್ಲಿ ಇವರು ಹಣದ ದುರುಪಯೋಗ ಮಾಡತಕ್ಕಂಥ ಪ್ರಶ್ನೆ ಬರುವುದೇ ಇಲ್ಲ. ಇದರಲ್ಲಿ ಆದ್ದರಿಂದ ಈ ಯೋಜನೆಯಲ್ಲಿ ಅವರು ಯೋಜನೆಯ ಸಿದ್ಧತೆಗೊಳಿಸತಕ್ಕಂಥದ್ದಾದಲ್ಲಿ ತಡವಾಗಿರಬಹುದು ವಿನಃ ಬೇರೆ ಯಾವುದೇ ಹಣಕಾಸಿನ ದುರುಪಯೋಗ ಈ ಸಂಸ್ಥೆಗಳಿಂದ ಆಗುವುದಕ್ಕೆ ಸಾಧ್ಯವಿಲ್ಲ. ಜಿಲ್ಲಾ ಪಂಚಾಯತಿಯ ಇಂಜಿನೀಯರಿಂಗ್ ವಿಭಾಗವೇ ಈ ಕಾರ್ಯಕ್ರಮ ಕಾಮಗಾರಿಯ ಉಸ್ತುವಾರಿಯನ್ನು ವಹಿಸಿಕೊಂಡಿರುವುದರಿಂದ ಇವರು ಸಿದ್ಧತಾ ಕೆಲಸವನ್ನು ಮಾಡಿ ಆ ಒಂದು ಯೋಜನೆಯಲ್ಲಿ ಕುಡಿಯುವ ನೀರನ್ನು ಮತ್ತು ಇತರೆ ಜಲನಿರ್ಮಲ ಯೋಜನೆಗೆ ಸಂಬಂಧಪಟ್ಟಂತಹ ಕಾಮಗಾರಿಯನ್ನು ಪೂರೈಸತಕ್ಕಂಥಾದ್ದು ಒಂದು ಮತ್ತು ಎರಡನೇ ಏಕಕಾಲಕ್ಕೆ ಪ್ರಾರಂಭವಾಗಿವೆ. ಆದ್ದರಿಂದ ಇಲ್ಲಿ ಯಾವುದೇ ದುರುಪಯೋಗ ಆಗಲಿಕ್ಕೆ ಸಾಧ್ಯವಿಲ್ಲ.

ಶ್ರೀ ಸಿ.ಎಂ. ಉದಾಸಿ: ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಉತ್ತರ ಕೊಟ್ಟಿರತಕ್ಕಂಥಾದ್ದರಲ್ಲಿ ನೆರವು ಸಂಸ್ಥೆಗಳು ಸಮರ್ಪಕವಾಗಿ ಕೆಲಸ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ಹೌದು ಎಂದು ಉತ್ತರ ಬಂದಿದೆ. ಹೌದು ಎಂದು ಇರಬೇಕಾದಾಗ ಏನು ಆಗಿದೆ ಹಾಗಾದರೆ? ಅದನ್ನು ಸಭೆಗೆ ಹೇಳಬೇಕು.

ಡಾ. ಹೆಚ್.ಸಿ. ಮಹದೇವಪ್ಪ: ಮಾನ್ಯ ಅಧ್ಯಕ್ಷರೇ ಕಾಮಗಾರಿ ನಿಧಾನವಾಗಿರುವುದರಿಂದ ಇದು ಮಂದಗತಿಯಲ್ಲಿ ಸಾಗುತ್ತಿದೆ. ಕ್ರಿಯಾಯೋಜನೆ ಬೇಗ ತಯಾರು ಮಾಡಿದರೆ ಅದು ಕಾರ್ಯಾರಂಭ ತ್ವರಿತ ಗತಿಯಲ್ಲಿ ಆಗುತ್ತದೆ. ಆದರೆ ಇವರು ಯಾವುದೇ ರೀತಿಯ ದುರುಪಯೋಗ ಮಾಡಲಿಕ್ಕೆ ನೆರವು ಸಂಸ್ಥೆಗಳಿಗೆ ಅವಕಾಶ ಇಲ್ಲ.

ಶ್ರೀ ಸಿ.ಎಂ. ಉದಾಸಿ:- ಕೆಲಸ ಮಾಡದೇ ಹಣ ಪಡೆದಿರುವಂತಾದ್ದು ಯಾವುದಾದರೂ ತಮ್ಮ ಗಮನಕ್ಕೆ ಬಂದಿದೆಯೇ?

ಡಾ. ಹೆಚ್.ಸಿ. ಮಹದೇವಪ್ಪ: ಇಲ್ಲ. ಆ ತರಹದ್ದು ಯಾವುದೂ ಇಲ್ಲ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 3703

ಸದಸ್ಯರ ಹೆಸರು : ಶ್ರೀ ಅಕ್ಕಿಮಲ್ಲಿಕಾರ್ಜುನ ಸಹದೇವಪ್ಪ(ಕುಂದಗೋಳ್)

ಉತ್ತರಿಸಬೇಕಾದ ದಿನಾಂಕ: 30.3.2005

ಉತ್ತರಿಸುವವರು : ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರಗಳು
ಅ.	ಧಾರವಾಡ ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯತ್ ರಸ್ತೆಗಳಿಗೆ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ	ಧಾರವಾಡ ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯತ್ ಅಡಿ ಬರುವ ರಸ್ತೆಗಳು ಒಟ್ಟು 3258 ಕಿ.ಮೀ. ಉದ್ದವಿರುತ್ತದೆ. 2004-05ನೇ ಸಾಲಿನಲ್ಲಿ ಈ ರಸ್ತೆಗಳಿಗೆ ರೂ. 205.89 ಲಕ್ಷ ಹಣವನ್ನು ಖರ್ಚು ಮಾಡಲಾಗಿದೆ. ರಸ್ತೆಗಳಿಗೆ ಖರ್ಚು ಮಾಡಿದ ವಿವರ ಕೆಳಗಿನಂತಿದೆ.

ಕ್ರ.ಸಂ.	ಲೆಕ್ಕಶೀರ್ಷಿಕೆ	ಖರ್ಚು (ರೂ. ಲಕ್ಷಗಳಲ್ಲಿ)
1	5054 ಗ್ರಾಮೀಣ ಸಂಪರ್ಕ ರಸ್ತೆಗಳು	22.60
2.	ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ	50.00
3.	ಪಿ.ಎಂ.ಜಿ.ಎಸ್.ವೈ. ಹಂತ-2 ಮತ್ತು	103.29
4.	ನಬಾರ್ಡ್ ೯-ಆರ್ ಐಡಿಎಫ್-೪	30.00
	ಒಟ್ಟು	205.89